# ತಹಶೀಲ್ದಾರರ ನ್ಯಾಯಾಲಯ ಹಗರಿಬೊಮ್ಮನಹಳ್ಳಿ

ನಂ/ಕಂ/ಪಹಣಿ/ವಿವಾದ/09/2016-17; ದಿನಾಂಕ: 06.09.2016

| ವಾದಿ | ಪ್ರತಿವಾದಿ |
| --- | --- |
| ಶ್ರೀಮತಿ ಜೆ ಎಂ ಕವಿತ | 1.ದುರುಗಪ್ಪ ತಂದೆ ಲೇಟ್ ಹನುಮಪ್ಪ |
| ಗಂಡ ಜೆ ಎಂ ರಾಜೇಂದ್ರಕುಮಾರ | ಪಿಂಜಾರಹೆಗ್ಡಾಳ್ ಗ್ರಾಮ,ಹ.ಬೊ.ಹಳ್ಳಿ(ತಾ) |
| ಪಿಂಜಾರಹೆಗ್ಡಾಳ್ ಗ್ರಾಮ, ಹಗರಿಬೊಮ್ಮನಹಳ್ಳಿ(ತಾ) | 2.ಹೆಚ್ ದುರುಗಪ್ಪ ತಂದೆ ಲೇಟ್ ಊರಪ್ಪ |
| | ಪಟೇಲ್ ನಗರ,ಹೊಸಪೇಟೆ(ಪೋ & ತಾ) |

**ಉಪಸ್ಥಿತರು:ಕೆ.ಬಿ.ಆನಂದಪ್ಪನಾಯಕ್, ಕ.ಆ.ಸೇ**
**ತಹಶೀಲ್ದಾರರು**
**ಹಗರಿಬೊಮ್ಮನಹಳ್ಳಿ**

ವಿಷಯ:-ಹಗರಿಬೊಮ್ಮನಹಳ್ಳಿ ತಾಲೂಕು ಪಿಂಜಾರಹೆಗ್ಡಾಳ್ ಗ್ರಾಮದ ಸರ್ವೆ ನಂ.111/1 ವಿ:01.70 ಎಕರೆ ಜಮೀನನ್ನು ಡಾ.ನಂ.ಹೆಚ್.ಬಿ.ಹೆಚ್.1.00733/2016.17; ದಿ: 26.05.2016ರ ನೊಂದಾಯಿತ ಕ್ರಯ ದಸ್ತಾವೇಜು ಪತ್ರದ ಪ್ರಕಾರ ಹಕ್ಕುಬದಲಾವಣೆ ಮಾಡಲು ದಾಖಲಾದ ತಕರಾರು ಅರ್ಜಿ ವಿಚಾರಣೆ ಕುರಿತು.

*******

ಪೀಠಿಕೆ;

ಹಗರಿಬೊಮ್ಮನಹಳ್ಳಿ ತಾಲೂಕು ಪಿಂಜಾರಹೆಗ್ಡಾಳ್ ಗ್ರಾಮದ ಸರ್ವೆ ನಂ.111/1 ವಿ:01.70 ಎಕರೆ ಜಮೀನನ್ನು ಡಾ.ನಂ.ಹೆಚ್.ಬಿ.ಹೆಚ್.1.00733/2016.17; ದಿ:26.05.2016ರ ನೊಂದಾಯಿತ ಕ್ರಯ ದಸ್ತಾವೇಜು ಪತ್ರದ ಪ್ರಕಾರ ಕ್ರಯದಾರರಾದ ವಾದಿಯ ಹೆಸರಿನಲ್ಲಿ ಹಕ್ಕುಬದಲಾವಣೆ ಮಾಡಲು ಕ್ರಮವಹಿಸಲಾಗಿ ನಿಗದಿತ ಅವಧಿಯೊಳಗೆ 02ನೇ ಪ್ರತಿವಾದಿಯು ತಕರಾರು ಅರ್ಜಿಯನ್ನು ಸಲ್ಲಿಸಿರುವುದರಿಂದ ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಹಕ್ಕು ಬದಲಾವಣೆ ಆದೇಶ ಸಂ/ಹೆಚ್-67/2015-16; ದಿ: .07.16ರ ಪ್ರಕಾರ ಕಂದಾಯ ನಿರೀಕ್ಷಕರು ಹ.ಬೊ.ಹಳ್ಳಿ ರವರು ಸಲ್ಲಿಸಿರುತ್ತಾರೆ.

ಕಂದಾಯ ನಿರೀಕ್ಷಕರು ಹ.ಬೊ.ಹಳ್ಳಿ ರವರ ಹಕ್ಕುಬದಲಾವಣೆ ಆದೇಶದನ್ವಯ ದಿನಾಂಕ:-01.09.2016 ರಂದು ವಿಚಾರಣೆಗೆ ಹಾಜರಾಗುವಂತೆ ಉಭಯರಿಗೆ ನೋಟಿಸ್ ನೀಡಿ ಕರ್ನಾಟಕ ಭೂ ಕಂದಾಯ ಕಾಯ್ದೆ-1964ರ ಕಲಂ129(4)ರನ್ವಯ ವಿಚಾರಣೆ ಮಾಡಲಾಯಿತು,ವಿಚಾರಣೆಗೆ ಉಭಯರು ಹಾಜರಾಗಿರುತ್ತಾರೆ. ವಿಚಾರಣೆಗೆ ಹಾಜರಾದ ಉಭಯರನ್ನು ವಿಚಾರಣೆ ಮಾಡಲಾಗಿ, ವಿವಾದಿತ ಜಮೀನು ಹಾಲಿ ಪಹಣಿ ದಾಖಲೆಯ ಪ್ರಕಾರ 01ನೇ ಪ್ರತಿವಾದಿಯ ಹೆಸರಿನಲ್ಲಿ ಹಕ್ಕು ದಾಖಲೆ ಇರುತ್ತದೆ,ಸದರಿ ಜಮೀನನ್ನು ನೊಂದಾಯಿತ ಕ್ರಯ ದಸ್ತಾವೇಜು ಪ್ರಕಾರ ವಾದಿಗೆ ಕ್ರಯಕ್ಕೆ ನೀಡಿದ್ದು ಕ್ರಯ ಪತ್ರದ ಪ್ರಕಾರ ಹಕ್ಕುಬದಲಾವಣೆ ಮಾಡಲು 02ನೇ ಪ್ರತಿವಾದಿಯು ತಕರಾರು ಅರ್ಜಿ ಸಲ್ಲಿಸಿರುತ್ತಾರೆ, ಸದರಿ ತಕರಾರು

ಕುರಿತು ಗ್ರಾಮದಲ್ಲಿ ಉಭಯರು ರಾಜಿ ಮಾಡಿಕೊಂಡಿದ್ದು ಕ್ರಯ ಪತ್ರದ ಪ್ರಕಾರ ಹಕ್ಕುಬದಲಾವಣೆ ಮಾಡಲು ಯಾವುದೇ ಆಕ್ಷೇಪಣೆ ಇರುವುದಿಲ್ಲಾ ಎಂದು ತಿಳಿಸಿರುತ್ತಾರೆ. ಹಾಗೂ ರಾಜಿ ಕುರಿತು ಛಾಪಾ ಕಾಗದದಲ್ಲಿ ಒಪ್ಪಿಗೆ ಪತ್ರವನ್ನು ಹಾಜರುಪಡಿಸಿರುತ್ತಾರೆ.

ಉಭಯರ ಹೇಳಿಕೆ ಪ್ರಕಾರ ದಾಖಲೆಗಳನ್ನು ಪರಿಶೀಲಿಸಲಾಗಿ, ವಿವಾದಿತ ಜಮೀನು ಪಹಣಿ ದಾಖಲೆಯ ಪ್ರಕಾರ 01ನೇ ಪ್ರತಿವಾದಿ ಹೆಸರಿನಲ್ಲಿ ಹಕ್ಕು ದಾಖಲೆ ಇರುತ್ತದೆ, ಸದರಿ ವಿಕ್ರಯದಾರರು ನೊಂದಾಯಿತ ದಸ್ತಾವೇಜು ಪ್ರಕಾರ ವಾದಿಗೆ ಕ್ರಯಕ್ಕೆ ನೀಡಿರುತ್ತಾರೆ, ಕ್ರಯ ಪತ್ರದ ಪ್ರಕಾರ ಹಕ್ಕುಬದಲಾವಣೆಗೆ ತಕರಾರು ಸಲ್ಲಿಸಿದ 02ನೇ ಪ್ರತಿವಾದಿಯು ರೂ 100/- ಛಾಪಾ ಕಾಗದದಲ್ಲಿ ತಕರಾರನ್ನು ವಾಪಾಸ್ ಪಡೆದ ಬಗ್ಗೆ ಒಪ್ಪಿಗೆ ಪತ್ರವನ್ನು ನೀಡಿರುತ್ತಾರೆ. ಕಾರಣ ವಿವಾದಿತ ಜಮೀನನ್ನು ತಕರಾರು ದಾರರ ರಾಜಿ ಒಪ್ಪಿಗೆ ಪತ್ರದ ಪ್ರಕಾರ ಕ್ರಯದಾರರ ಹೆಸರಿನಲ್ಲಿ ಹಕ್ಕುಬದಲಾವಣೆ ಮಾಡಲು ಈ ಕೆಳಗಿನಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳಿಗಾಗಿ ಹಾಗೂ ವಾಸ್ತವಾಂಶಗಳ ಹಿನ್ನಲೆಯಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕು ಪಿಂಜಾರಹೆಗ್ಡಾಳ್ ಗ್ರಾಮದ ಸರ್ವೆ ನಂ.111/1 ವಿ:01.70 ಎಕರೆ ಜಮೀನನ್ನು ಡಾ.ನಂ.ಹೆಚ್.ಬಿ.ಹೆಚ್.1.00733/2016.17; ದಿ:26.05.2016ರ ನೊಂದಾಯಿತ ಕ್ರಯ ದಸ್ತಾವೇಜು ಪತ್ರದ ಪ್ರಕಾರ ಕ್ರಯದಾರರಾದ ವಾದಿಯ ಹೆಸರಿನಲ್ಲಿ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ತಿದ್ದಿ ದಿನಾಂಕ: 06.09.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

ತಾಲೂಕು ಕಾರ್ಯನಿರ್ವಾಹಕ ದಂಡಾಧಿಕಾರಿಗಳು ಹ.ಬೊ.ಹಳ್ಳಿ

(ಕೆ.ಬಿ.ಆನಂದಪ್ಪನಾಯಕ್)
ತಹಶೀಲ್ದಾರರು
ಹಗರಿಬೊಮ್ಮನಹಳ್ಳಿ

ಗೆ,
ವಾದಿ/ಪ್ರತಿವಾದಿಗೆ

ಪ್ರತಿಯನ್ನು:
ಶಿರಸ್ತೇದಾರರು ಭೂಮಿ ಕೇಂದ್ರ ತಾಲೂಕು ಕಛೇರಿ ಹಗರಿಬೊಮ್ಮನಹಳ್ಳಿ ಇವರಿಗೆ ಅಗತ್ಯ ಕ್ರಮಕ್ಕಾಗಿ ನೀಡಿದೆ.
ಕಂದಾಯ ನಿರೀಕ್ಷಕರು ಹಗರಿಬೊಮ್ಮನಹಳ್ಳಿ ಇವರಿಗೆ ಮಾಹಿತಿಗಾಗಿ ನೀಡಿದೆ.